ಸೋಮವಾರ, 27 ಮಾರ್ಚ್ 2017 | ಪುಟಗಳು: 16+4(PTR6) | ಬೆಲೆ: ₹ 4.00
www.vijaykarnataka.com
ಸಂಪುಟ: 16 | ಸಂಚಿಕೆ: 241
VK
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ
ಇಂದು ವಿಶ್ವರಂಗಭೂಮಿ ದಿನ
ವಿಜಯ ಕರ್ನಾಟಕ

ಧರ್ಮಶಾಲಾ ಟೆಸ್ಟ್: ಭಾರತಕ್ಕೆ ಪೂಜಾರ, ಕೆ.ಎಲ್. ರಾಹುಲ್, ಅರ್ಧ ಶತಕದ ಆಸರೆ P14

ವಿದ್ಯುನ್ಮಾನ ಮತಯಂತ್ರಗಳು ಶೇ. 100 ಸುರಕ್ಷಿತ, ತಿರುಚಲು ಸಾಧ್ಯವೇ ಇಲ್ಲ: ಚುನಾವಣಾ ಆಯೋಗ P11

ಟೈಮ್ ಮ್ಯಾಗಜೆನ್‌ನ 100 ಪ್ರಭಾವಿ ವ್ಯಕ್ತಿ ಪಟ್ಟಿಯಲ್ಲಿ ಮೋದಿಗೆ ಈ ಬಾರಿಯೂ ಸ್ಥಾನ

# ಸಹ್ಯಾದ್ರಿ ಕ್ಯಾಂಪಸ್‌ನಲ್ಲಿ ವಿಶ್ವ ಜಲ ದಿನಾಚರಣೆ




**ವಿಕ ಸುದ್ದಿಲೋಕ** ಮಂಗಳೂರು

ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೆಜ್ಮೆಂಟ್, ಸಿವಿಲ್ ಎಂಜಿನಿಯರಿಂಗ್ ಇಲಾಖೆ ಮತ್ತು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸಹಯೊಗದಲ್ಲಿ, ಸಹ್ಯಾದ್ರಿ ಕ್ಯಾಂಪಸ್‌ನಲ್ಲಿ ಶನಿವಾರ ವಿಶ್ವ ಜಲ ದಿನಾಚರಣೆ ಆಚರಿಸಲಾಯಿತು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಾಧೀಶ ಮತ್ತು ಸದಸ್ಯ ಕಾರ್ಯದರ್ಶಿ ಮಲ್ಲನಗೌಡ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಭವಿಷ್ಯದ ಪೀಳಿಗೆಗೆ ಸಂರಕ್ಷಿಸುವ ನಿರು ಪ್ರಾಮುಖ್ಯತೆ ತಿಳಿ ಹೇಳಿದರು.

ಬೆಂಗಳೂರಿನ ಭಾರತಿಯ ವಿಜ್ಞಾನ ಸಂಸ್ಥೆಯ ಪ್ರೊಫೆಸರ್ ಎಂ.ಎಸ್. ಮೊಹನ್ ಕುಮಾರ್ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ಸಮಾಜದ ಸಮಗ್ರ ಅಭಿವೃದ್ಧಿಯನ್ನು ಅತ್ಯಗತ್ಯ ನೀರಿನ ಸೂಕ್ತ ಬಳಕೆ ಅಳವಡಿಸಿಕೊಂಡಾಗ ಮಾತ್ರ ಸಾಧ್ಯ ಎಂದರು. ಬೆಂಗಳೂರಿನಲ್ಲಿ ಒಳ ಚರಂಡಿ ನೀರು ಸಂಸ್ಕರಣ ಮತ್ತು ನಾನಾ ಉದ್ದೇಶಗಳಿಗಾಗಿ ಮರುಬಳಕೆ ವಿವಿಧ ಕಾರ್ಯವಿಧಾನಗಳ ಬಗ್ಗೆ ವಿವರಿಸಿದರು.

ಸಂಧಿಲಿನ್
ಗಂಟುನೋವು, ಬೆನ್ನು ನೋವು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ
ನೋವಿಗೆ ಶೀಘ್ರ ಪರಿಣಾಮಕಾರಿ
SDM
ISO / GMP CERTIFIED
sdmaph@gmail.com
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ

ಸಾಪ್ತಾಹಿಕ
ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ
Regd.No.UDP/1259/2015-17 | udayavani.com | UDAYAVANI – KANNADA DAILY – MANIPAL ಮಣಿಪಾಲ, ರವಿವಾರ, ಮಾರ್ಚ್ 26, 2017 ಬೆಲೆ: ₹ 5-00 ವಿದೇಶ ಬೆಲೆ: ₹ 6-00

CENTRAL LIBRARY

# ಸಹ್ಯಾದ್ರಿ ಕ್ಯಾಂಪಸ್: ವಿಶ್ವ ಜಲ ದಿನಾಚರಣೆ

**ಅಡ್ಯಾರ್,** ಮಾ.25: ಸಹ್ಯಾದ್ರಿ ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್, ಸಿವಿಲ್ ಎಂಜಿನಿಯರಿಂಗ್ ವಿಭಾಗ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸಹಯೋಗದಲ್ಲಿ ವಿಶ್ವ ಜಲ ದಿನವನ್ನು ಸಹ್ಯಾದ್ರಿ ಕಾಲೇಜು ಆವರಣದಲ್ಲಿ ಆಚರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಹಿರಿಯ ಸಿವಿಲ್ ನ್ಯಾಯಾಧೀಶ ಮತ್ತು ಸದಸ್ಯ ಕಾರ್ಯದರ್ಶಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಮಲ್ಲನಗೌಡ, ಭವಿಷ್ಯದ ಪೀಳಿಗೆಗೆ ನೀರು ಸಂರಕ್ಷಿಸುವ ಪ್ರಾಮುಖ್ಯತೆಯನ್ನು ವಿವರಿಸಿದರು.

ಭಾರತೀಯ ವಿಜ್ಞಾನ ಸಂಸ್ಥೆಯ ಎಂಜಿನಿಯರಿಂಗ್ ಪ್ರೊಫೆಸರ್ ಎಮ್.ಎಸ್ ಮೋಹನ್ ಕುಮಾರ್ ಮಾತನಾಡಿ, ನೀರಿನ ಸೂಕ್ಷ್ಮ ಬಳಕೆ ಜಲಕ್ಷಾಮವನ್ನು ತಡೆಯುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.



ಸಹ್ಯಾದ್ರಿ ಕಾಲೇಜಿನಲ್ಲಿ ವಿಶ್ವ ಜಲ ದಿನವನ್ನು ಆಚರಿಸಲಾಯಿತು.

ಬೆಂಗಳೂರಿನಲ್ಲಿ ಒಳ ಚರಂಡಿ ನೀರು ಸಂಸ್ಕರಣ ಮತ್ತು ವಿವಿಧ ಉದ್ದೇಶಗಳಿಗಾಗಿ ಮರುಬಳಕೆ ವಿವಿಧ ಕಾರ್ಯವಿಧಾನಗಳ ಬಗ್ಗೆ ವಿವರಿಸಿದರು.

ಪರಿಸರ ಅಧಿಕಾರಿ ರಾಜಶೇಖರ್ ಪುರಾಣಿಕ, ಸಹ್ಯಾದ್ರಿ ಕಾಲೇಜಿನ ಪ್ರಾಂಶುಪಾಲ ಡಾ । ಯು ಎಂ.ಭೂಷಿ, ಸಹ್ಯಾದ್ರಿ ಕಾಲೇಜಿನ ಸಂಶೋಧನೆ ಮತ್ತು ಕನ್ಸಲ್ಟೆನ್ಸಿ ನಿರ್ದೇಶಕ ಡಾ । ಎಸ್ ಮಂಜಪ್ಪ, ಎಂಆರ್‌ಪಿಎಲ್ ಹಿರಿಯ ವ್ಯವಸ್ಥಾಪಕ ಆರ್ ಶ್ರೀನಿವಾಸ್, ರಶೀದ್ ಉಪಸ್ಥಿತರಿದ್ದರು.

ಸಮಾರಂಭ ನಂತರ ಸಿವಿಲ್ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ತಾಂತ್ರಿಕ ಕಾರ್ಯಾಗಾರ ನಡೆಯಿತು.

ಪ್ರೊಫೆಸರ್ ಪುರುಷೋತ್ತಮ ಸಿ ಟಿ. ಸ್ವಾಗತಿಸಿದರು. ಎಂಜಿನಿಯರ್ ಜಯಪ್ರಕಾಶ್ ವಂದಿಸಿದರು.

ಭಾನುವಾರ, ಮಾರ್ಚ್ 26, 2017 | ಮಂಗಳೂರು | ₹ 5.00 | ಪುಟ 26 + 2 | ಸಂಪುಟ 20 | ಸಂಚಿಕೆ 85
goo.gl/S62nF1 f/prajavani.net @prajavani
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ





ನೀರಿನ ಘಟಕಕ್ಕಿನ್ನು 'ದೇವರಾಜ ಅರಸು' ಹೆಸರು 4
ಮುಕ್ತಛಂದ
ಸನ್ಮಾನ್ಯ ಸಭಾಧ್ಯಕ್ಷರೇ ನಮ್ಮನ್ನು ಜೈಲಿಗೆ ಕಳುಹಿಸಿಬಿಡಿ 7



ಮೊರಾದಾಬಾದ್‌ನಲ್ಲಿ 60ನೇ 'ಅರ್ಥ್‌ಅವರ್' ಸಂದೇಶ ಸಾ

# ನೀರಿನ ಸಂರಕ್ಷಣೆಗೆ ಒತ್ತು ನೀಡಿ: ಮಲ್ಲನಗೌಡ

## ಸಹ್ಯಾದ್ರಿ ಕ್ಯಾಂಪಸ್‌ನಲ್ಲಿ ಜಲ ದಿನಾಚರಣೆ: ವಿದ್ಯಾರ್ಥಿಗಳಿಗೆ ಕಾರ್ಯಾಗಾರ

ಪ್ರಜಾವಾಣಿ ವಾರ್ತೆ

ಮಂಗಳೂರು: ನೀರು ಅಮೂಲ್ಯವಾದ ವಸ್ತು. ಕೃತಕವಾಗಿ ಸೃಷ್ಟಿಸಲಾಗದ ನೀರಿನ ಸಂರಕ್ಷಣೆ ಅವಶ್ಯಕವಾಗಿದೆ. ಭವಿಷ್ಯದ ಪೀಳಿಗೆಗೆ ನೀರನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಹೆಚ್ಚಿನ ಒತ್ತು ನೀಡಬೇಕು ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳೂ ಆದ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರಾದ ಮಲ್ಲನಗೌಡ ಹೇಳಿದರು.

ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್, ಸಿವಿಲ್ ಎಂಜಿನಿಯರಿಂಗ್ ವಿಭಾಗ ಮತ್ತು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸಹಯೋಗದಲ್ಲಿ ನಗರದ ಸಹ್ಯಾದ್ರಿ ಕ್ಯಾಂಪಸ್‌ನಲ್ಲಿ ಶನಿವಾರ ಆಯೋಜಿಸಿದ್ದ ವಿಶ್ವ ಜಲ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು.

ಭಾರತೀಯ ವಿಜ್ಞಾನ ಸಂಸ್ಥೆ ಸಿವಿಲ್ ಎಂಜಿನಿಯರಿಂಗ್ ವಿಭಾಗದ ಪ್ರೊ. ಎಂ.ಎಸ್ ಮೋಹನ್ ಕುಮಾರ್ ಮಾತನಾಡಿ, ನೀರಿನ ಸಂರಕ್ಷಣೆಯ ಕುರಿತು ಒಂದು ದಿನ ಚರ್ಚಿಸದರೆ ಸಾಲದು. ಇದು ನಿರಂತರವಾಗಿ ನಡೆಯಬೇಕು. ಸಮಾಜದ ಸಮಗ್ರ ಅಭಿವೃದ್ಧಿಗೆ ನೀರಿನ ಸಂರಕ್ಷಣೆ ಅವಶ್ಯಕ. ನೀರಿನ ಸೂಕ್ಷ್ಮ ಬಳಕೆ ಅಳವಡಿಸಿಕೊಂಡಾಗ ಮಾತ್ರ ನೀರಿನ ಸಂರಕ್ಷಣೆ ಸಾಧ್ಯ ಎಂದರು.




ಮಂಗಳೂರಿನ ಸಹ್ಯಾದ್ರಿ ಕಾಲೇಜಿನಲ್ಲಿ ಶನಿವಾರ ಆಯೋಜಿಸಿದ್ದ ವಿಶ್ವ ಜಲ ದಿನಾಚರಣೆಯಲ್ಲಿ ಪ್ರೊ. ಎಂ.ಎಸ್. ಮೋಹನ್‌ಕುಮಾರ್ ಮಾತನಾಡಿದರು.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿ ರಾಜಶೇಖರ್ ಪುರಾಣಿಕ, ವಿಶ್ವ ಜಲದಿನದ ಮಹತ್ವವನ್ನು ವಿವರಿಸಿದರು. ಪ್ರೊ. ಪುರುಷೋತ್ತಮ ಸಿ.ಟಿ. ಸ್ವಾಗತಿಸಿದರು. ಪ್ರಾಂಶುಪಾಲ ಡಾ. ಯು.ಎಂ.ಭೂಷಿ, ಕಾಲೇಜಿನ ಸಂಶೋಧನೆ ಮತ್ತು ಕನ್ಸಲ್ಟೆನ್ಸಿ ನಿರ್ದೇಶಕ ಡಾ. ಎಸ್. ಮಂಜಪ್ಪ, ಎಂ.ಆರ್.ಪಿ.ಎಲ್‌ನ ಪರಿಸರ ವಿಭಾಗದ ಹಿರಿಯ ವ್ಯವಸ್ಥಾಪಕ ಆರ್. ಶ್ರೀನಿವಾಸ್, ಆಹಾರ ವಿಜ್ಞಾನಗಳ ಸಂಘದ ಸದಸ್ಯ ರಶೀದ್ ಇದ್ದರು.

ಜಯ ಪ್ರಕಾಶ್ ವಂದಿಸಿದರು.

ಸಮಾರಂಭ ನಂತರ ಸಿವಿಲ್ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ತಾಂತ್ರಿಕ ಕಾರ್ಯಾಗಾರ ನಡೆಯಿತು. ಭಾರತೀಯ ವಿಜ್ಞಾನ ಸಂಸ್ಥೆಯ ಪ್ರೊ.ಎಂ.ಎಸ್. ಮೋಹನ್‌ಕುಮಾರ್, ವಿಶ್ವ ಜಲ ದಿನದ ಕುರಿತು ವಿವರಣೆ ನೀಡಿದರು. ಡಾ. ಎಸ್. ಮಂಜಪ್ಪ ಇದ್ದರು.

'ನೀರು- ಆಹಾರ- ಶಕ್ತಿ ಮತ್ತು ಆರೋಗ್ಯ' ಹಾಗೂ 'ಕೈಗಾರಿಕಾ ತ್ಯಾಜ್ಯ ನೀರಿನ ಸಂಸ್ಕರಣೆ ಮತ್ತು ಮರುಬಳಕೆ' ಕುರಿತು ಗೋಷ್ಠಿ ನಡೆದವು.

ಸಹ್ಯಾದ್ರಿ ಕಾಲೇಜ್ ವಿದ್ಯಾರ್ಥಿಗಳ ಜತೆ ಸಂಪನ್ಮೂಲ ವ್ಯಕ್ತಿಗಳು ಸಂವಾದ ನಡೆಸಿದರು.

**ನೀರ** ನೆಮ್ಮದಿಯ ನಾಳೆ

**ಬೆಂಗಳೂರಿನಲ್ಲಿ ಒಳಚರಂಡಿ ನೀರು ಸಂಸ್ಕರಣೆ ಮಾಡಲಾಗುತ್ತಿದ್ದು, ಅದನ್ನು ವಿವಿಧ ಉದ್ದೇಶಗಳಿಗಾಗಿ ಮರುಬಳಕೆ ಮಾಡುವ ನಿಟ್ಟಿನಲ್ಲಿ ಯೋಜನೆ ರೂಪಿಸಲಾಗಿದೆ.**

**ಪ್ರೊ. ಎಂ.ಎಸ್. ಮೋಹನ್‌ಕುಮಾರ್**
ಭಾರತೀಯ ವಿಜ್ಞಾನ ಸಂಸ್ಥೆ ಪ್ರಾಧ್ಯಾಪಕ

CELEBRATE THIS UGADI WITH ATTRACTIVE OFFERS ONLY AT
RUCHI SILK & SAREES
Gandhi Chowk, Dharwad. 0836-2216547
RUCHI SILKS
Dajibanpeth, Hubli. 0836-2216564

▪ ಮಂಗಳೂರು ▪ ಹುಬ್ಬಳ್ಳಿ ▪ ಕಲಬುರಗಿ ▪ ಬೆಂಗಳೂರು ▪ ದಾವಣಗೆರೆ

# ಸಂಯುಕ್ತ ಕರ್ನಾಟಕ

ಕನ್ನಡಿಗರ ಸಾಕ್ಷಿಪ್ರಜ್ಞೆ

ಎಂಟು ದಶಕದ ನಂಟು

▪ ಸಂಪುಟ 59 ▪ ಸಂಚಿಕೆ 60 | ಭಾನುವಾರ, 26, ಮಾರ್ಚ್, 2017 | ಪುಟ 12+6 | ರೂ. 5-00




ಮಂಗಳೂರು ಅಡ್ಯಾರ್ ಸಹ್ಯಾದ್ರಿ ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಮಂಗಳೂರು, ಸಿವಿಲ್ ಎಂಜಿನಿಯರಿಂಗ್ ಇಲಾಖೆ ಮತ್ತು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸಹಯೋಗದಲ್ಲಿ ಸಹ್ಯಾದ್ರಿ ಕ್ಯಾಂಪಸ್ನಲ್ಲಿ ವಿಶ್ವ ಜಲ ದಿನಾಚರಣೆ ಆಚರಿಸಲಾಯಿತು. ಹಿರಿಯ ಸಿವಿಲ್ ನ್ಯಾಯಾಧೀಶ ಮಲ್ಲನಗೌಡ, ಪ್ರೊ.ಎಮ್.ಎಸ್ ಮೋಹನ್ ಕುಮಾರ್ ಮೊದಲಾದವರಿದ್ದರು.